

ಎಂ.ಎಸ್‌. ಆಶಾದೇವಿ ಮತ್ತು ಡಾ. ವಿಜಯಮ್ಮ: ಸಂದರ್ಶನದ ಬಿಡುವಿನಲ್ಲಿ ಸಲ್ಲಾಪ

ಆರೋಗ್ಯಕರ ಗಾಸಿಪ್‌ಗಳನ್ನೂ ಬರೀತಿದ್ದೆ.

ಉದಯವಾಣಿ ಪತ್ರಿಕೆಯಲ್ಲಿ ನನ್ನದೊಂದು ಕಾಲಂ ಇತ್ತು. 'ಬೆಂಗಳೂರು ಪತ್ರ' ಅಂತ. ಬೆಂಗಳೂರಿನಲ್ಲಿ ಆದ ಮುಖ್ಯ ಕಾರ್ಯಕ್ರಮಗಳು ಅಥವಾ ಬೆಳವಣಿಗೆಗಳನ್ನು ಇಟ್ಟುಕೊಂಡು ನಾನು ಆ ಕಾಲಂ ಬರಿತಿದ್ದೆ. ಆದರೆ, ವಾರಕ್ಕೊಮ್ಮೆ ಬರ್ತಾ ಇದ್ದ ಆ ಕಾಲಂನಲ್ಲಿ ನಾನು ಸುದ್ದಿಯನ್ನು ಹೇಳೋದು ಅನವಶ್ಯಕ ಆಗಿರ್ತಿತ್ತು. ಯಾಕೆ ಅಂದ್ರೆ, ಅಷ್ಟೊತ್ತಿಗಾಗಲೇ ಸುದ್ದಿ ಬಂದು ಬಿಟ್ಟಿರ್ತಾ ಇತ್ತು. ಅದಕ್ಕೇ ಅದನ್ನ ಎಷ್ಟು ಸಾಧ್ಯವೋ ಅಷ್ಟು ರೋಚಕವಾಗಿಸೋದಿಕ್ಕೆ ಪ್ರಯತ್ನಿಸ್ತಾ ಇದ್ದೆ. 'ರೂಪತಾರಾ'ದಲ್ಲಿ ಬಹುಪಾಲು ನನ್ನದೇ ಬರವಣಿಗೆಗಳು ಇರ್ತಾ ಇದ್ದವು. ವಿಜಯಾ, ಧರಣಿ, ಧಾರಿಣಿ, ಇಳಾ, ಧರಿತ್ರಿ, ಮಮತಾ, ವಿಂಧ್ಯಾ – ಹೀಗೆ, ಇಳೆಗೆ ಸಂಬಂಧಿಸಿದ ಏನೆಲ್ಲ ಹೆಸರಿನಲ್ಲಿ ಬರೀತಾ ಇದ್ದೆ! ಅನೇಕ ಒಳ್ಳೆಯ ಪ್ರಯೋಗಗಳನ್ನೂ ಆ ಸಂದರ್ಭದಲ್ಲಿ ನಾನು ಮಾಡಿದೆ. ಕವಿ ಗೋಪಾಲಕೃಷ್ಣ ಅಡಿಗರು ಸಿನಿಮಾ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರನ್ನು ಸಂದರ್ಶನ ಮಾಡಿದ್ರು. ಬೆಸಗರಹಳ್ಳಿ ರಾಮಣ್ಣ ಮತ್ತು ಕಾಳೇಗೌಡ ನಾಗವಾರ ಅವರು ಬಿ. ಸರೋಜಾದೇವಿ ಅವರನ್ನು ಸಂದರ್ಶನ ಮಾಡಿದ್ರು. ಎಂ.ಪಿ. ಶಂಕರ್ ಅವರನ್ನು ಶೂದ್ರ ಶ್ರೀನಿವಾಸ್ ಅವರು, ನಾಗಮಣಿ ಎಸ್. ರಾವ್ ಮತ್ತು ಅವರ ಪತಿ ಸಯ್ಯಾಜಿ ರಾವ್ ಅವರು ತೂಗುದೀಪ ಶ್ರೀನಿವಾಸ್ ಅವರನ್ನು ಸಂದರ್ಶನ ಮಾಡಿದ್ದರು. ತೂಗುದೀಪ ಅವರು ಕ್ರಿಕೆಟ್ ಅಭಿಮಾನಿ, ಸಯ್ಯಾಜಿ ರಾವ್ ಅವರು ಕ್ರಿಕೆಟ್ ಅಂಪೈರ್ ಆಗಿದ್ದವರು. ತೂಗುದೀಪ ಅವರಿಗಂತೂ ಸಯ್ಯಾಜಿರಾವ್ ಅವರನ್ನು ನೋಡಿ ಸಂಭ್ರಮ. ವನಮಾಲಾ ವಿಶ್ವನಾಥ್, ಕೆ.ಎಂ. ಶಂಕರಪ್ಪ ಅವರು ರಾಜಕುಮಾರ್ ಅವರನ್ನ ಸಂದರ್ಶನ ಮಾಡಿದ್ದರು. ಬಿ.ಎಸ್. ವೆಂಕಟಲಕ್ಷ್ಮಿ ಕೂಡ ಕೆಲವು ಸಂದರ್ಶನಗಳನ್ನ ಮಾಡ್ಕೊಟ್ಟಿದ್ದರು. ವಿದ್ಯಾಶಂಕರ್ ಮೊದಲಾದವರು 'ರೂಪತಾರಾ'ಗೆ ಬರೆದಿದ್ದಾರೆ. ಒಟ್ಟಿನಲ್ಲಿ ಸಾಹಿತ್ಯ ಮತ್ತು ಸಿನಿಮಾ ಎನ್ನುವ ಎರಡು ಕಲಾ ಪ್ರಕಾರಗಳನ್ನ ಎದುರುಬದುರಾಗಿಸುವ ಮತ್ತು ಪೂರಕಗೊಳಿಸುವ ಒಳ್ಳೆಯ ಪ್ರಯತ್ನ ಅದು ಅನ್ನುವ ಸಮಾಧಾನ ಮತ್ತು ಸಂತೋಷ ನನಗಿದೆ. ಅದೇ ಕಾಲದಿಂದಲೇ ನಾನು ಅಂತರರಾಷ್ಟ್ರೀಯ ಸಿನಿಮೋತ್ಸವಗಳಿಗೆ ಹೋಗಲು ಶುರು ಮಾಡಿದ್ದು. ಇವತ್ತಿಗೂ ಅದನ್ನ ನಾನು ಮುಂದುವರೆಸಿಕೊಂಡು ಬಂದಿದ್ದೀನಿ. ಸಿನಿಮಾ ವಿವರಗಳಿಗೆ ಸಂಬಂಧಪಟ್ಟಂತೆ